**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಾಗಮಂಗಲ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 714/2020**

**ಸಿ.ಡಬ್ಲ್ಯೂ-1**
**ಪಿ.ಡಬ್ಲ್ಯೂ-1**

**ಸಾಕ್ಷಿಗೆ ದಿನಾಂಕ 11-06-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಪಾಟಿ |
| ತಂದೆಯ ಹೆಸರು | ಃ ಕುಲ್ಲುಬ |
| ವಯಸ್ಸು | ಃ 30 ವರ್ಷ |
| ಉದ್ಯೋಗ | ಃ ಬಳೆ ವ್ಯಾಪಾರ |
| ವಾಸಸ್ಥಳ | ಃ ಶಿಕಾರಿಪುರ |

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ನ್ಯಾಯಾಲಯದ ಮುಂದೆ ಇರುವ ಆರೋಪಿ ಪರಿಚಯ ಇದೆ. ನನಗೆ ಚಾಸಾ 2 ರಿಂದ 8 ರವರ ಪರಿಚಯ ಇದೆ. ಆರೋಪಿಯಿಂದ ನಾನು ಸುಮಾರು 20 ಸಾವಿರ ಸಾಲ ಪಡೆದಿದ್ದೆ. ಸದರಿ ಸಾಲದ ಭದ್ರತೆಗಾಗಿ ನಾನು ಆರೋಪಿಗೆ ಎರಡುಬರೆದ ಚೆಕ್ಗಗಳನ್ನು ಮತ್ತು ಒಂದು ಬಾಂಡ್ ಪೇಪರ ಮತ್ತು ಸ್ಟಾಂಪ ಪೇಪರನ್ನು ಕೊಟ್ಟಿದ್ದೆನು.

2. ದಿನಾಂಕ 25-03-2020 ರಂದು ಬೆಳಗ್ಗೆ 10 ಗಂಟೆಗೆ ಶಿಕಾರಿಪುರದ ನಮ್ಮ ಮನೆಯ ಹತ್ತಿರ ಆರೋಪಿಯು ಬಂದು ಸಾಲದ ಹಣ ಕೇಳಿದಾಗ ನಾನು ಸಾಲದ ಹಣವನ್ನು ಬಡ್ಡಿಯ ಸಮೇತ ಕಟ್ಟುತ್ತಾ ಬಂದಿದ್ದು, ನಾನು ನೀಡಿರುವಂತೆ ಚೆಕ್ಕು ಮತ್ತು ಛಾಪಾ ಕಾಗದವನ್ನು ಹಿಂತಿರುಗಿಸುವಂತೆ ಆರೋಪಿಯನ್ನು ಕೇಳಿದಾಗ, ಆರೋಪಿಯು ಇನ್ನೂ ಹಣ ಬಾಕಿ ಇದೆ ಎಂದು ನನ್ನೊಂದಿಗೆ ಜಗಳ ತೆಗೆದಿರುತ್ತಾರೆ.

3. ಆರೋಪಿಯು ಹಾರೆಯಿಂದ ನನ್ನ ಟಿವಿಎಸ್ ಮೊಪೆಡ, ಮನೆಯಲ್ಲಿದ್ದ ಟಿ ವಿ ಮತ್ತು ಇತರೆ ಸಾಮಾಗ್ರಿಗಳು ಹಾಗೂ ಗೋಡೆಗಳಿಗೆ ಹಾರೆಯಿಂದ ಒಡೆದು

ಸುಮಾರು 1 ಲಕ್ಷದವರೆಗೆ ನಷ್ಟ ಪಡಿಸಿರುತ್ತಾರೆ. ಆರೋಪಿಯು ಚಾಸಾ 3 ರವರಿಗೆ ಮೈಕೈ ಹಿಡಿದು ಎಳೆದಾಡಿ ಕೆನ್ನೆಗಳಿಗೆ ಹೊಡೆದು ಹಲ್ಲೆ ನಡೆಸಿರುತ್ತಾರೆ. ಆಗ ಚಾಸಾ 4 ಮತ್ತು 5 ರವರು ಬಂದು ಗಲಾಟೆ ಬಿಡಿಸಿದರು. ಆರೋಪಿಯು ನಮ್ಮನ್ನು ಕುರಿತು ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. ಆರೋಪಿಯು ಹಾರೆಯಿಂದ ನನಗೆ ಹೊಡೆಯಲು ಬಂದಿದ್ದು, ನಾನು ತಪ್ಪಿಸಿಕೊಂಡಿದ್ದೇನೆ. ಆರೋಪಿಯು ನನಗೆ ಜೀವ ಬೆದರಿಕೆ ಹಾಕಿರುತ್ತಾರೆ. ಸದರಿ ಜಗಳದ ವಿಚಾರವಾಗಿ ಊರಿನಲ್ಲಿ ಪಂಚಾಯಿತಿ ಮಾಡಿದರೂ ಕೂಡಾ ಆರೋಪಿಯು ನಮಗೆ ನಷ್ಟ ತುಂಬಿ ಕೊಡಲಿಲ್ಲ.

4. ನಂತರ ನಾನು ಆರೋಪಿಯ ವಿರುದ್ದ ನಾಗಮಂಗಲ ಗ್ರಾಮಾಂತರ ಪೊಲೀಸ ಠಾಣೆಯಲ್ಲಿ ದೂರು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, **ದೂರನ್ನು ನಿಪಿ-01 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-01(ಎ) ಎಂದು ಗುರುತಿಸಲಾಯಿತು.**

**5.** ನಾನು ದೂರು ಸಲ್ಲಿಸಿದ ನಂತರ ಪೊಲೀಸ ಅಧಿಕಾರಿಗಳು ನಮ್ಮ ಮನೆಗೆ ವಿಚಾರಣೆಗೆ ಬಂದಿದ್ದರು. ಪೊಲೀಸ ಅಧಿಕಾರಿಗಳು ಟಿವಿಎಸ್ ಮೊಪೆಡ್, ಮನೆಯಲ್ಲಿ ಚೆಲ್ಲಾಪಿಲ್ಲಿಯಾಗಿದ್ದ ದೃಶ್ಯವನ್ನು ನಾನು ತೋರಿಸಿದಂತೆ ಚಾಯ ಚಿತ್ರ ತೆಗೆದಿರುತ್ತಾರೆ. **ಸಾಕ್ಷಿಯು ತನಿಖಾ ಕಾಲಾದಲ್ಲಿ ಪೊಲೀಸ ಅಧಿಕಾರಿಗಳು ತೆಗೆದಿದ್ದ 5 ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-2 ರಿಂದ 6 ಎಂದು ಗುರುತಿಸಲಾಯಿತು.** ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದಾಗ ನಾನು ಮತ್ತು ನಮ್ಮ ಮನೆಯವರು ಇದ್ದರು. ತನಿಖೆ ಕಾಲಕ್ಕೆ ಆರೋಪಿಯು ಕೃತ್ಯಕೆ ಬಳಸಿದ್ದ ಹಾರೆಯನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಹಾರೆಯನ್ನು ನಾನು ಪೊಲೀಸರಿಗೆ ತನಿಖೆ ಕಾಲದಲ್ಲಿ ಪೊಲೀಸರಿಗೆ ನೀಡಿದ ಹಾರೆಯಾಗಿರುತ್ತದೆ. **ಸದರಿ ಹಾರೆಯನ್ನು ಎಂ ಒ 1 ಎಂದು ಗುರುತಿಸಲಾಯಿತು.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 714/2020**
**ಸಿ.ಡಬ್ಲ್ಯೂ-1**
**ಪಿ.ಡಬ್ಲ್ಯೂ-1**

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದಾರೆ ಹಾಗಾಗಿ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಸಾಕ್ಷಿಯು ಪ್ರಕರಣದ ಪ್ರತ್ಯಕ್ಷ ಸಾಕ್ಷಿ ಮತ್ತು ಗಾಯಾಳು ಆಗಿದ್ದು ಮುಖ್ಯ ವಿಚಾರಣೆಯಲ್ಲಿ ಸಾಕ್ಷಿಯು ಪಂಚನಾವೆಯ ಕುರಿತಂತೆ ಅಭಿಯೋಜನೆಯ ಪ್ರಕರಣಕ್ಕೆ ಭಾಗಶಃ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ**

ದಿನಾಂಕ 20-03-2020 ರಂದು ಮಹಜರ ಕ್ರಮ ಜರುಗಿಸಲು ನಮ್ಮ ಮನೆಯ ಹತ್ತಿರ ಬಂದಿದ್ದರು ಎಂದರೆ ಸರಿ. ಅದೇ ದಿನ ಚಸಾ 6 ಮತ್ತು 7 ರವರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿದರು ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಕಬ್ಬಿಣದ ಹಾರೆ ಮತ್ತು ಮೊಪೆಡನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ. ನಾನು, ಚಾಸಾ 6 ಮತುತ 7 ರವರು ಸಹಿ ಮಾಡಿದ್ದೇವೆ ಎಂದರೆ ಸರಿ. **ಸಾಕ್ಷಿಯು ಸ್ಥಳ ಪಂಚನಾಮೆ ಅದರ ಮೇಲೆ ಇರುವ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಗಳನ್ನು ನಿಪಿ-7 ಎಂದು ಗುರುತಿಸಲಾಯಿತು.**

**2.** ದಿನಾಂಕ 22-03-2020 ರಂದು ಘಟನೆಯ ಕುರಿತಂತೆ ನನಗೆ ನಷ್ಟ ಮಾಡಿದ ಚಾಸಾ 3 ರವರಿಗೆ ಹಲ್ಲೆ ಮಾಡಿದ ಕುರಿತು ಮರು ಹೇಳಿಕೆಯನ್ನು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಸಂಬಂಧಿಸಿದಂತೆ ಕೆಎ-54 ಎಲ್ 2198 ರ ಮೊಪೆಡಗೆ ಕಬ್ಬಿಣದ ಹಾರೆಯಿಂದ ಒಡೆದು ಜಖಂ ಮಾಡಿದ್ದರು ಎಂದರೆ ಸರಿ.

**ಪಾಟೀ ಸವಾಲು ಶ್ರೀ ಎಂ ಪಿ ಪಿ ಎಸ್ ಆರೋಪಿಯ ವಕೀಲರಿಂದ**

ಆರೋಪಿಯಿಂದ ಸಾಲದ ಹಣವನ್ನು ದೂರು ದಾಖಲಿಸುವ ಸುಮಾರು 5 ವರ್ಷದ ಹಿಂದೆಯೇ ಪಡೆದಿದ್ದೆನು. ದೂರನ್ನು ದಾಖಲಿಸುವ ಕಾಲಕ್ಕೆ ನಾನು ಆರೋಪಿಗೆ ಬಡ್ಡಿ ಹಣ ನೀಡಿದ್ದನ್ನು ಕುರಿತು ಯಾವುದೇ ರಸೀದಿ ಕೊಟ್ಟಿರಲಿಲ್ಲ. ಸಾಕ್ಷಿಯು ಮುಂದುವರಿದು 20 ಸಾವಿರ ರೂಪಾಯಿ ಹಣ ಹಿಂತಿರುಗಿದ್ದೇನೆ ಎಂದು ನುಡಿದರು.

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 714/2020**
**ಸಿ.ಡಬ್ಲ್ಯೂ-1**
**ಪಿ.ಡಬ್ಲ್ಯೂ-1**

2. ಆರೋಪಿಗೆ ಸಾಲದ ಹಣದ ಭದ್ರತೆಗಾಗಿ ಕೊಟ್ಟಿದ್ದೆ ಎನ್ನಲಾದ ಎರಡು ಚೆಕ್ಕುಗಳ ನಂಬರ್ ಹೇಳಲು ಬರುವುದಿಲ್ಲ , ಸಾಕ್ಷಿಯು ಮುಂದುವರಿದು ನನಗೆ ಓದಲು ಬರೆಯಲು ಬರುವುದಿಲ್ಲ ಎಂದು ನುಡಿದರು. ಛಾಪಾಕಾಗದವನ್ನು ಯಾವ ದಿನಾಂಕದಂದು ಎಂದು ಖರೀದಿಸಲಾಯಿತು ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿಯಿಂದ ಸಾಲದ ಹಣ ಪಡೆದಿದ್ದು, ಆರೋಪಿಯು ಮರುಪಾವತಿಸುವಂತೆ ಕೇಳಿದಾಗ ಆರೋಪಿಯ ವಿರುದ್ದವೇ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

3. ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲವಾದರೂ ಅವರು ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಮನೆಗೆ ಅತಿಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನೊಂದಿಗೆ ಜಗಳ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಾನು ಹೇಳುವಂತೆ ಮನೆಯಲ್ಲಿದ್ದ ಬಟ್ಟೆ, ಪಾತ್ರೆ ಸಾಮಾನು ಪೆಟ್ಟಿಗೆಗಳನ್ನು ಒಡೆದು ಜಖಂಗೊಳಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನ ಮೊಬೈಲನ್ನು ಕೂಡಾ ಒಡೆದು ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ 1 ಲಕ್ಷ ರೂಪಾಯಿನಷ್ಟ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಆರೋಪಿಯು ಕಬ್ಬಿಣದ ಎಂ ಒ 1 ರಿಂದ ನನ್ನ ಕಾಲಿಗೆ ಹೊಡೆದರು ಎಂದು ಸುಳ್ಳು ದೂರು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ 3 ರವರನ್ನು ಆರೋಪಿಯು ಹಿಡಿದು ಎಳೆದಾಡಿದರು ಮತ್ತು ಹಲ್ಲೆ ನಡೆಸಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 4 ಮತ್ತು 5 ರವರು ಘಟನೆ ಸ್ಥಳಕ್ಕೆ ಬಂದು ಜಗಳ ಬಿಡಿಸಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಮ್ಮ ಮನೆಯಲ್ಲಿ ನಾನು, ನನ್ನ ಕುಟುಂಬದವರಾದ ಚಾಸಾ 2 ರಿಂದ 4 ರವರು ವಾಸವಾಗಿರುತ್ತೇವೆ. ನಾನು ಮತ್ತು ನನ್ನ ಕುಟುಂಬದವರು ಆರೋಪಿಗೆ ಸಾಲದ ಹಣವನ್ನು ಮರುಪಾವತಿ ಮಾಡುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಈ ರೀತಿ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

6. ದೂರನ್ನು ನಮ್ಮ ವಕೀಲರಾದ ಕೆಂಪೇಗೌಡ ಎಂಬುವರು ಬರೆದುಕೊಟ್ಟಿದ್ದರು. ಘಟನೆಯು ನಡೆದ ಎಷ್ಟು ಗಂಟೆಯ ನಂತರ ವಕೀಲರ ಕಚೇರಿಗೆ ಬಂದಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಘಟನೆ ನಡೆದ ನಂತರ ಪೊಲೀಸ ಠಾಣೆಗೆ ಹೋಗಿದ್ದು, ಪೊಲೀಸ ಅಧಿಕಾರಿಗಳು ದೂರನ್ನು ಬರೆಸಿಕೊಂಡು ಬರುವಂತೆ ಹೇಳಿದ್ದರಿಂದ ನಾನು ವಕೀಲರ ಕಚೇರಿಗೆ ಹೋಗಿದ್ದೆನು. ವಕೀಲರ ಕಚೇರಿಗೆ ಬಂದಾಗ ಮದ್ಯಾಹ್ನ ಸುಮಾರು 12-00 ರಿಂದ 1-00 ಗಂಟೆ ಯಾಗಿತ್ತು. ವಕೀಲರ ಕಚೇರಿಯಲ್ಲಿ ಅಂದಾಜು ಸುಮಾರು ಅರ್ಧ ಗಂಟೆ ಇದ್ದೆ. ದೂರನ್ನು ಬರೆಸಿಕೊಂಡು ನಾನು ನೇರವಾಗಿ ಪೊಲೀಸ ಠಾಣೆಗೆ ಹೋದೆನು.

7. ಪೊಲೀಸ ಠಾಣೆಯಲ್ಲಿ ಸುಮಾರು 1 ರಿಂದ 2 ಗಂಟೆಯ ಅವಧಿಯವರೆಗೆ ಇದ್ದೆನು. ಪೊಲೀಸ ಠಾಣೆಯಲ್ಲಿ ಮದ್ಯಾಹ್ನ ಸುಮಾರು 2-30 ರ ವರೆಗೆ ಇದ್ದೆನು. ನಂತರ ನಾನು ಮನೆಗೆ ಹೋಗಿರುತ್ತೇನೆ. ಠಾಣೆಯಿಂದ ಮನೆಗೆ ನಾನು ಒಬ್ಬನೇ ಹೋಗಿರುತ್ತೇನೆ. ನನ್ನೊಂದಿಗೆ ಯಾರೂ ಕೂಡಾ ಬಂದಿರಲಿಲ್ಲ.

8. ದಿನಾಂಕ 26-03-2020 ರಂದು ಪೊಲೀಸನವರು ನಮ್ಮ ಮನೆಗೆ ಬಂದು ನನ್ನ ದೂರಿನ ಬಗ್ಗೆ ವಿಚಾರಣೆ ಮಾಡಿದ್ದರು. ಪೊಲೀಸನವರು ಮಧ್ಯಾಹ್ನ 3 ಗಂಟೆಗೆ ವಿಚಾರೆಗೆ ಬಂದಿದ್ದರು. ಪೊಲೀಸನವರು ವಿಚಾರಣೆಗೆ ಬಂದ್ದಾಗ ನಾನು ಮತ್ತು ಚಾಸಾ 2 ರಿಂದ 4 ರವರು ಹಾಜರಿದ್ದೆವು. ಬೇರೆ ಯಾರಾ ಕೂಡಾ ಇರಲಿಲ್ಲ. ಪೊಲೀಸನವರು ವಿಚಾರಣೆ ಮುಗಿಸಿ ಹೋಗುವಾಗ ಎಂ ಒ 1 ನ್ನು ತೆಗೆದು ಕೊಂಡು ಹೋಗಿದ್ದರು.

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 714/2020**
**ಸಿ.ಡಬ್ಲ್ಯೂ-1**
**ಪಿ.ಡಬ್ಲ್ಯೂ-1**

9. ಪೊಲೀಸನವರು ಮಹಜರನ್ನು ನಮ್ಮ ಮನೆಯಲ್ಲಿಯೇ ಬರೆದರು. ಮಹಜರ ಮಾಡಿದ ಜಾಗದ ಪೂರ್ವಕ್ಕೆ - ವಿದ್ಯಾರ್ಥಿ ನಿಲಯ ಮತ್ತು ಶಾಲೆ ಇದೆ. ಪಶ್ಚಿಮಕ್ಕೆ - ಬೆಟ್ಟ ಇದೆ. ದಕ್ಷಿಣಕ್ಕೆ - ಚರ್ಚ್ ಇದೆ . ಉತ್ತರಕ್ಕೆ - ಬೆಟ್ಟ ಇದೆ. ಪೊಲೀಸನವರು ನಾನು ಹೇಳಿದಂತೆ ಘಟನಾ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಮಹಜರ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಯಾವುದೇ ಕಬ್ಬಿಣದ ಹಾರೆಯನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

10. ಆರೋಪಿಯು ಚಾಸಾ 3 ರವರನ್ನು ಮೈ ಕೈ ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಸಲುವಾಗಿ ಅವರ ವಿರುದ್ದ ವಿನಾಃ ಕಾರಣ ಸುಳ್ಳು ದೂರು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನಾನು ಯಾವುದೇ ಚೆಕ್ಕುಗಳನ್ನು ಮತ್ತು ಚಾಪಾ ಕಾಗದ ಕೊಟ್ಟಿಲ್ಲವಾದರೂ ಕೂಡಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

**ನನ್ನ ಸಮಕ್ಷಮ**

**ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ನಾಗಮಂಗಲ.**